
# ನಮ್ಮ ಅದ್ಭುತ ಜಗತ್ತು

ಹರ್ಮೀಂದರ್ ಓಹರಿ



Read India
An Imprint of Pratham Books

RGF Pratham SERIES

Original Story (*English*) Our Wonderful World by Herminder Ohri
© Rajiv Gandhi Foundation-Pratham Books, 2004

Second Kannada Edition: 2006

Illustrations: Herminder Ohri & Baaraan Ijlal
Design: Moonis Ijlal
Kannada Translation: Dr. Divaspathy Hegde

ISBN: 81-8263-089-4


Registered Office:
PRATHAM BOOKS
9, Charles Campbell Road, Cox Town,
Bangalore 560 005
✆ 080-25801462, 25801463

Regional Offices:
Mumbai ✆ 022-65162526
New Delhi ✆ 011-65684113

Typesetting by: Eshwari Graphics,
Bangalore 560 050
Layout by: Pratham Books

Printed by:
Repro India Ltd.
Mumbai

Some rights reserved. This book is CC-BY-[illegible] licensed.
Full terms of use and attribution available at:
http://www.prathambooks.org/cc




# ನಮ್ಮ ಅದ್ಭುತ ಜಗತ್ತು


ಲೇಖಕರು
**ಹರ್ಮೀಂದರ್ ಓಹರಿ**

ಚಿತ್ರಗಳು
**ಹರ್ಮೀಂದರ್ ಓಹರಿ**
**ಬಾರಾನ್ ಇಜ್‌ಲಾಲ್**

ಕನ್ನಡ ಅನುವಾದ
**ಡಾ. ದಿವಸ್ಪತಿ ಹೆಗ್ಡೆ**


ಎಷ್ಟೋ ವರ್ಷಗಳ ಹಿಂದೆ, ಆಗ ಭೂಮಿಯ ಮೇಲೆ ಮನುಷ್ಯರು ಇರಲಿಲ್ಲ. ಒಮ್ಮೆ ದೇವರು ತಾನು ಸೃಷ್ಟಿಸಿದ ಭೂಮಿಯತ್ತ ನೋಡಿದ. ತನ್ನ ಈ ಸೃಷ್ಟಿಯ ರಕ್ಷಣೆಗೆ ಯಾರಾದರೂ ಬೇಕು ಎಂದು ಆಲೋಚಿಸಿದ.






ಆಗ ಸಿಂಹ ಘರ್ಜಿಸಿತು,
‘‘ನಾನು ವನರಾಜ,
ಈ ಭೂಮಿಯನ್ನು
ರಕ್ಷಿಸಬಲ್ಲೆ’’.


ಆನೆ ದೊಡ್ಡದಾಗಿ ಘೀಳಿಟ್ಟಿತು. ‘‘ಹೇ ದೇವರೇ, ನೀನು ನನಗೆ ಗಾತ್ರ ಹಾಗೂ ಭವ್ಯತೆ ಕೊಟ್ಟಿದ್ದೀಯೆ. ಆದರಿಂದ ನಿಜವಾಗಿ ನಾನೇ ಈ ಕಾರ್ಯಕ್ಕೆ ತಕ್ಕವನು’’ ಎಂದಿತು.



ಬಹುಗಾತ್ರದ ತಿಮಿಂಗಿಲ ಮೀನು ಆಕಾಶದತ್ತ ನೋಡಿ ಕಾರಂಜಿಯಂತೆ ನೀರನ್ನು ಚಿಮ್ಮಿಸುತ್ತ ಹೇಳಿತು. ''ಇವಕ್ಕೆಲ್ಲ ನನ್ನಂತೆ ಈಜಲು ಬರುವುದೇನು? ಸಮುದ್ರದ ಒಳಗಿರುವ ಜೀವ ಜಂತುಗಳ ರಕ್ಷಣೆ ಅವರಿಗೆ ಸಾಧ್ಯವೇನು?




ನಾನು ಇವರನ್ನೆಲ್ಲರನ್ನೂ ನೋಡಿಕೊಳ್ಳ ಬಲ್ಲೆ. ನಾನು ನನ್ನ ತಲೆಯನ್ನು ನೀರಿನಿಂದ ಮೇಲೆತ್ತಿ ಭೂಮಿಯ ಮೇಲೆ ನಡೆಯುವುದನ್ನೂ ತಿಳಿಯ ಬಲ್ಲೆ. ಗಾತ್ರದಲ್ಲಿ ನನಗೆ ಯಾರೂ ಸಾಟಿಯಿಲ್ಲ. ನಾನು ನಿನ್ನ ಆಶಯ ನೆರವೇರಿಸ ಬಲ್ಲೆ'' ಎಂದು ದೇವರಿಗೆ ಹೇಳಿ. ಈ ಜಗತ್ತಿನ ರಕ್ಷಣೆಗೆ ತನ್ನ ಚೂಪಾದ ಹಲ್ಲುಗಳೇ ಸಾಕು ಎಂದು ಶಾರ್ಕ್ ಮೀನು ಯೋಚಿಸಿತು.



ಇವರ ಮಾತುಗಳನ್ನು ಕೇಳಿ ಗರುಡ ನಕ್ಕಿತು. "ಪ್ರಾಣಿಗಳು ಭೂಮಿಯ ಮೇಲಿನದನ್ನು ಮಾತ್ರ ರಕ್ಷಿಸ ಬಲ್ಲವು. ತಿಮಿಂಗಿಲ ಮತ್ತು ಶಾರ್ಕ್ ಮೀನುಗಳು ಜಲಚರಗಳನ್ನು ಮಾತ್ರ ನೋಡ ಬಲ್ಲವು. ಆದರೆ ನಾನು ಹಾರಬಲ್ಲೆ, ಆದ್ದರಿಂದ ಭೂಮಿ ಹಾಗೂ ಸಮುದ್ರ ಎರಡನ್ನೂ ವೀಕ್ಷಿಸಬಲ್ಲೆ. ಭೂಮಿಯ ರಕ್ಷಕನಾಗಲು ನಾನು ಮಾತ್ರವೇ ಯೋಗ್ಯ" ಎಂದಿತು.





ದೇವರು ಇವರೆಲ್ಲರ ಮಾತುಗಳನ್ನೂ ಆಲಿಸಿದನು. ''ನಾನು ಮನುಷ್ಯನನ್ನು ಸೃಷ್ಟಿಸುತ್ತೇನೆ'' ಎಂದನು. ಇದನ್ನು ಕೇಳಿದ ಪ್ರಾಣಿಗಳಿಗೆಲ್ಲ ಆಶ್ಚರ್ಯ ಆಯಿತು. ''ಮನುಷ್ಯ'' ಎಂದರೆ ಏನಿರ ಬಹುದು? ಅದರ ಬಣ್ಣ ಏನಿರ ಬಹುದು? ರೆಕ್ಕೆಯಿರ ಬಹುದೇ? ಪೊರೆಯಿರ ಬಹುದೇ?

ಅವನು ಸಿಂಹದಂತೆ ಓಡ ಬಹುದೇ?


ಮೀನಿನಂತೆ ಈಜ ಬಹುದೇ?

ಗರುಡನಂತೆ ಆಕಾಶದಲ್ಲಿ ಹಾರಾಡ ಬಹುದೇ?

ಸೂರ್ಯ ಮುಳುಗಿದ. ಸುತ್ತಲೂ ಕತ್ತಲಾಯಿತು. ದೇವರು ಮೊದಲ ಗಂಡು ಹಾಗೂ ಹೆಣ್ಣನ್ನು ಸೃಷ್ಟಿಸಿದ. ನಕ್ಷತ್ರಗಳ ಹೊಳಪನ್ನು ಅವರ ಕಣ್ಣುಗಳಲ್ಲಿ ತುಂಬಿದ. ಕಪ್ಪುಮೋಡದಂತಹ ಕೂದಲನ್ನು ಅವರಿಗೆ ಕೊಟ್ಟ, ಚಂದ್ರನಂತೆ ಹಾಲು ಬಣ್ಣದ ಉಗುರು, ಹಲ್ಲುಗಳನ್ನು ಕೊಟ್ಟ.

ಹೀಗೆ ರಾತ್ರಿಯ ಕತ್ತಲಂತೆ ಹೊಳೆಯುವ ಬಣ್ಣವುಳ್ಳ ಮೊದಲ ಮಾನವ ಜೋಡಿಯನ್ನು ಸೃಷ್ಟಿಸಿದ.

ದೇವರು ಅವರಿಗೆ ಬಲಿಷ್ಠ ಕಾಲುಗಳನ್ನು, ಅತ್ಯಂತ ಚುರುಕು ಬುದ್ಧಿಯನ್ನು ಕೊಟ್ಟ. ಬುದ್ಧಿ ಹಾಗೂ ಕೈಗಳ ಸಹಾಯದಿಂದ ವಿಸ್ಮಯಕರ ವಸ್ತುಗಳನ್ನು ನಿರ್ಮಿಸಿ ಆಕಾಶದಲ್ಲಿ ಹಾರುವುದು, ಚಿರತೆಗಿಂತ ವೇಗವಾಗಿ ಚಲಿಸುವುದು, ನೀರಿನಲ್ಲಿ ಮೀನಿಗಿಂತ ಚುರುಕಾಗಿ ತೇಲುವುದು ಮನುಷ್ಯನಿಗೆ ಸಾಧ್ಯವಾಗುವಂತೆ ಮಾಡಿದ.




ಕತ್ತಲೆ ಹರಿದು ಬೆಳಗು ಮೂಡಿತು. ಬೆಳಗಿನ ಸೂರ್ಯನ ಬಿಳಿ ಕಿರಣಗಳು, ಆಕಾಶದ ನೀಲಿ, ಬಂಗಾರದ ಗೋಲದಂತೆ ಹೊಳೆಯುವ ಸೂರ್ಯನ ಹೊಂಬಣ್ಣಗಳನ್ನು ಸೇರಿಸಿ ದೇವರು ಇನ್ನೊಂದು ಜೋಡಿ ಮಾನವರನ್ನು ಸೃಷ್ಟಿಸಿದ. ಅವರ ಮೈ ಬಣ್ಣ ಬಿಳಿಯದು, ಕಣ್ಣುಗಳು ನೀಲಿ ಹಾಗೂ ಕೂದಲು ಹೊಂಬಣ್ಣದಿಂದ ಹೊಳೆಯುತ್ತಿದ್ದವು.



ನಿಧಾನವಾಗಿ ಮುಂಜಾನೆ ಕಳೆದು ಮಧ್ಯಾಹ್ನವಾಯಿತು. ಸೂರ್ಯ ಅತ್ಯಂತ ಪ್ರಕಾಶಮಾನವಾಗಿದ್ದ. ಅಲ್ಲಿಂದ ಹಳದಿ ಬಣ್ಣ ಪಡೆದು ಅದನ್ನು ಚರ್ಮಕ್ಕೆ ಕೊಟ್ಟ, ಸ್ಫುಟವಾಗಿ ಬಿದ್ದ ಕಪ್ಪು ನೆರಳಿನಿಂದ ಕೂದಲು ಸೃಷ್ಟಿಸಿದ. ಪ್ರಕಾಶಮಾನವಾಗಿದ್ದ ಸೂರ್ಯನನ್ನು ನೇರವಾಗಿ ನೋಡಲು ಆಗುವುದಿಲ್ಲ, ಆದ್ದರಿಂದ ಓರೆಯಾದ ಬಾದಾಮಿ ಆಕಾರದ ಕಣ್ಣು ಕೊಟ್ಟು ಮೂರನೆಯ ಮನುಷ್ಯ ಜೋಡಿಯನ್ನು ದೇವರು ಸೃಷ್ಟಿಸಿದ.



ಹಗಲು ಕಳೆದು ಕತ್ತಲಾಗುತ್ತ ಬಂತು, ನಸುಗತ್ತಲಿನ ಮಸುಕು ಬೆಳಕು ಹರಡಿತು. ಅಲ್ಲಲ್ಲಿ ಒಂದೊಂದು ನಕ್ಷತ್ರ ಕಾಣಲಾರಂಭಿಸಿತು. ಸುಂದರವಾದ ಕಂದು ಬಣ್ಣದ ಭೂಮಿಯನ್ನು ದೇವರು ನೋಡಿದ. ಕಂದು ಮೈಬಣ್ಣ, ಹಾಗೂ ಮಿನುಗುವ ಕಪ್ಪು ಕಣ್ಣುಗಳನ್ನಿಟ್ಟು ದೇವರು ನಾಲ್ಕನೆಯ ಮಾನವ ಜೋಡಿಯನ್ನು ಸೃಷ್ಟಿ ಮಾಡಿದ.



ಪ್ರಾಣಿಗಳೆಲ್ಲ ಆಶ್ಚರ್ಯದಿಂದ ಈ ಹೊಸ ಜೀವಿಗಳನ್ನು ನೋಡಿದವು. ಅವರು ಎರಡು ಕಾಲುಗಳ ಮೇಲೆ ನಿಂತಿದ್ದರು. ಅವರ ಚರ್ಮದ ಮೇಲೆ ದಪ್ಪ ಕೂದಲಿನ ಹೊದಿಕೆಯಿರಲಿಲ್ಲ, ಅವರಿಗೆ ರೆಕ್ಕೆಗಳಿರಲಿಲ್ಲ, ಅಥವಾ ಚರ್ಮದ ಮೇಲೆ ದಪ್ಪ ಪೊರೆಯೂ ಇರಲಿಲ್ಲ. ಈ ಮಾನವರನ್ನು ನೋಡಿ ಸಿಂಹ ಘರ್ಜಿಸಿತು.

"ನಾನು ಅವರಿಗಿಂತ ವೇಗವಾಗಿ ಓಡಬಲ್ಲೆ, ನನ್ನ ಕಾಲ ಪಂಜಾದ ಒಂದೇ ಹೊಡೆತದಿಂದ ಅವರನ್ನು ಕೊಲ್ಲಬಲ್ಲೆ. ಹೀಗೆ ಹೇಳಲು ನನಗೆ ಖೇದವಾಗುತ್ತಿದೆ, ಆದರೂ ಇದು ಸತ್ಯ".




''ಬೂದು ಬಣ್ಣ ಇನ್ನೂ ಚೆನ್ನಾಗಿ ಒಪ್ಪುತ್ತಿತ್ತು'' ಎಂದು ಆನೆ ಸಾರಿತು.


''ಒಂದಿಷ್ಟು ಚುಕ್ಕೆಗಳಿರ ಬಹುದಿತ್ತು'' ಚಿರತೆ ನುಡಿಯಿತು.

''ಕೆಲವಾದರೂ ಪಟ್ಟೆಗಳಿದ್ದರೆ ಅವರು ಇನ್ನೂ ಸುಂದರವಾಗಿ ಕಾಣುತ್ತಿದ್ದರು'' ಝೀಬ್ರಾ ತನ್ನ ಸಲಹೆ ನೀಡಿತು.



ಶಾರ್ಕ್ ಮೀನು ಮನುಷ್ಯನ ಪುಟ್ಟ ಪುಟ್ಟ ಹಲ್ಲುಗಳನ್ನು ನೋಡಿ, ತನ್ನ ದೊಡ್ಡ ದೊಡ್ಡ ಚೂಪಾದ ಹಲ್ಲುಗಳನ್ನೊಮ್ಮೆ ಪ್ರದರ್ಶಿಸಿತು. ಇವರಿಗೆ ತಮ್ಮಂತೆ ಈಜು ರೆಕ್ಕೆಗಳಿಲ್ಲ, ಈತ ಹೇಗೆ ಈಜ ಬಲ್ಲ ? ಹೇಗೆ ಜಗತ್ತಿನ ರಕ್ಷಣೆ ಮಾಡಬಲ್ಲ ? ಎಂದು ಮೀನುಗಳು ''ಹ್ಹಾ, ಹ್ಹಾ, ಹ್ಹಾ'' ಎಂದು ನಕ್ಕು , ನಗುವಿನ ಗುಳ್ಳೆ ಎಬ್ಬಿಸುತ್ತ ಈಜಿ ಹೋದವು.





ದೇವರು ಕರುಣೆಯಿಂದ ಮುಗುಳು ನಕ್ಕು ಹೇಳಿದ:

"ನೋಡಿ, ಮನುಷ್ಯ ತಾನು ಬದುಕ ಬೇಕಾದರೆ ಎಲ್ಲಾ ಪ್ರಾಣಿಗಳು, ಎಲ್ಲ ಚಲಚರಗಳು, ಪಕ್ಷಿಗಳು, ಸಸ್ಯಗಳು ಎಲ್ಲವನ್ನೂ ಕಾಳಜಿಯಿಂದ ನೋಡಿಕೊಳ್ಳ ಬೇಕಾಗುತ್ತದೆ. ತನ್ನ ದುರಾಸೆಯಿಂದ ಅವನು ಇವುಗಳನ್ನು ನಾಶಮಾಡಲು ಹೊರಟರೆ ಅವನೇ ನಾಶವಾಗುತ್ತಾನೆ" ಎಂದು ಅವಕ್ಕೆ ತಿಳಿ ಹೇಳಿದನು. ದೇವರ ಮಾತು ಕೇಳಿ ಎಲ್ಲಾ ಜೀವಿಗಳು, ಮೀನು - ಹಕ್ಕಿ - ಪ್ರಾಣಿಗಳು ದೇವರಿಗೆ ತಲೆಬಾಗಿ, ತಾವು ಸುರಕ್ಷಿತವಾಗಿ ಇರುತ್ತೇವೆಂಬ ವಿಶ್ವಾಸ ತಾಳಿದವು.

ಅದಕ್ಕಾಗಿ ನಾವು ನೀವು ಎಲ್ಲಾ ಈ 'ಅದ್ಭುತ ಜಗತ್ತನ್ನು' ರಕ್ಷಿಸೋಣ.





ಸೃಷ್ಟಿಕರ್ತನು ಸಿಂಹ, ಆನೆ, ತಿಮಿಂಗಿಲ, ಶಾರ್ಕ್,
ಮೀನುಗಳು ಹೀಗೆ ವೈವಿಧ್ಯಮಯ ಪಶು ಪಕ್ಷಿಗಳನ್ನು
ಸೃಷ್ಟಿಸಿದನು. ನಂತರ ಭೂಮಿಯ ರಕ್ಷಣೆಗಾಗಿ ಮನುಷ್ಯನನ್ನು
ನಿರ್ಮಿಸಲು ತೊಡಗಿದನು. ಪಶು ಪಕ್ಷಿಗಳು ಇದನ್ನು
ವಿರೋಧಿಸಿದವು. ಕೊನೆಗೂ ಸೃಷ್ಟಿಕರ್ತನು ಅವರ
ಮಾತನ್ನು ಮನ್ನಿಸಿದನೇ? " ನಮ್ಮ ಅದ್ಭುತ ಜಗತ್ತು "
ಕಥೆಯನ್ನು ಓದಿ ತಿಳಿಯಿರಿ.


ಈ ಮಾಲಿಕೆಯ ಇತರ ಪುಸ್ತಕೆಗಳು :

**ಮೊಸಳೆ ಮತ್ತು ಪಾತರಗಿತ್ತಿ • ಒಂದು ದೊಡ್ಡ ವಿಪತ್ತು**

**ಜೇಡರ ಚಾಲ್ಯ • ನೌಕಾಯಾನ**

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ
**www.prathambooks.org**



ಪ್ರಥಮ್ ಬುಕ್ ಭಾರತೀಯ ಭಾಷೆಗಳಲ್ಲಿ ಉತ್ತಮ ದರ್ಜೆಯ ಮತ್ತು ಕಡಿಮೆ
ಬೆಲೆಯ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರು.

ISBN 81-8263-089-4
9788182630895

Namma Adbhutha Jagatthu (Kannada)
Rs. 20.00